2729 (3405) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಾನುವಾರುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಗ್ರಾಹಕರುಗಳಿಗೆ ಉತ್ತಮವಾದ ಹಾಗೂ ಪುಷ್ಟೀಕರವಾದ ಹಾಲನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ರೈತರು ಹಾಗೂ ಗ್ರಾಹಕರ ಉತ್ತಮ ಸಂಬಂಧಕ್ಕೆ ಯಾವ ರೀತಿಯ ಕಾರ್ಯ ಕ್ರಮವನ್ನು ಹಾಕಿಕೊಳ್ಳಲಾಗಿದೆ?

ಈ) ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಗ್ರಾಮೀಣ ರೈತರು ಉತ್ಪಾದಿಸುವ ಹಾಲನ್ನು ಖರೀದಿಸಲು ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 1) ದೇಶಿ ತಳಿ ದನಗಳ ಸಂರಕ್ಷಣೆ.

2) ಉತ್ತಮ ತಳಿ ಮತ್ತು ದೇಶಿ ತಳಿ ಉತ್ಪಾದನೆ ಹಾಗೂ ಘನೀಕೃತ ವೀರ್ಯ ಉತ್ಪಾದನೆ ಹಾಗೂ ಸರಬರಾಜು.

3) ಇಲಾಖೆಯ 3774 ವಿವಿಧ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಆರೋಗ್ಯ ರಕ್ಷಣೆ, ರೋಗ ನಿಯಂತ್ರಣ, ಕೃತಕ ಗರ್ಭಧಾರಣ ವಿಸ್ತೀರ್ಣ ಮುಂತಾದ ಕಾರ್ಯಕ್ರಮಗಳ ಅನುಷ್ಠಾನ.

4) ವಿವಿಧ ಪಶುವೈದ್ಯಕೀಯ ಚಟುವಟಿಕೆಗಳ ಬಗ್ಗೆ ರೈತರಿಗೆ ತರಬೇತಿ ನೀಡುವುದು.

5) ದಿನಾಂಕ: 1–1–2005ರಿಂದ ಕಾಲು ಬಾಯಿ ಜ್ವರ ಮತ್ತು ಹುಚ್ಚು ನಾಯಿ ತಡೆಗಟ್ಟುವ ಲಸಿಕೆ ಹೊರತುಪಡಿಸಿ ಎಲ್ಲಾ ಲಸಿಕೆಗಳು ಉಚಿತ ಪೂರೈಕೆ.

6) ಕುರಿ ಅಭಿವೃದ್ಧಿಗಾಗಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಸ್ಥಾಪನೆ.

ಆ) ಗ್ರಾಹಕರುಗಳಿಗೆ ಉತ್ಕೃಷ್ಟ ಗುಣಮಟ್ಟದ ಶುದ್ಧ ಹಾಗೂ ತಾಜಾ ಹಾಲು ಒದಗಿಸಲು ಅನುಕೂಲವಾಗುವಂತೆ ವಿವಿಧ ರೀತಿಯ ಜಿಡ್ಡಿನಾಂಶವುಳ್ಳ ಹಾಲನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಗ್ರಾಮೀಣ ಪ್ರದೇಶದಲ್ಲಿ ಹೈನುಗಾರರು ಉತ್ತಮ ಗುಣಮಟ್ಟದ ಹಾಲನ್ನು ಉತ್ಪಾದಿಸಲು ಬೇಕಾದ ತಾಂತ್ರಿಕ ಸವಲತ್ತುಗಳನ್ನು ನೀಡಿ ಉತ್ಪಾದಿಸುವ ಹಾಲಿಗೆ ನಿಶ್ಚಿತ ಮಾರುಕಟ್ಟೆ ಒದಗಿಸಿ ಖರೀದಿಸಲಾಗುತ್ತಿದೆ, ಹಾಗೆಯೇ ಪಟ್ಟಣ ಪ್ರದೇಶದ ಗ್ರಾಹಕರರಿಗೆ ಶುದ್ಧ ಹಾಲನ್ನು ಸ್ಪರ್ಧಾತ್ಮಕ ದರದಲ್ಲಿ ಒದಗಿಸಲಾಗುತ್ತಿದೆ ಹಾಗೂ ಗ್ರಾಹಕರಿಗೆ ನಿರಂತರವಾಗಿ ನಂದಿನಿ ಹಾಲಿನ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಶಾಲಾ ಮಕ್ಕಳನ್ನು ಡೈರಿ ವೀಕ್ಷಣೆಗೆ ಕರೆತಂದು ಹಾಲಿನ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಈ) ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸಲು ರೈತರು ಉತ್ಪಾದಿಸುವ ಹಾಲಿಗೆ ನಿರಂತರವಾಗಿ ಮಾರುಕಟ್ಟೆ ಸೌಲಭ್ಯ ಒದಗಿಸಲಾಗಿದೆ. ಪ್ರಸ್ತುತ ಕರ್ನಾಟಕ ಹಾಲು ಮಂಡಳಿ/ಒಕ್ಕೂಟಗಳು ಗ್ರಾಮೀಣ ಮಟ್ಟದಲ್ಲಿ 8206 ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ರೈತರು ಉತ್ಪಾದಿಸುವ ಹಾಲನ್ನು ಸಂಘಗಳ ಮೂಲಕ ಖರೀದಿಸಲು ವ್ಯವಸ್ಥೆ ಮಾಡಲಾಗಿದೆ.

2730 (3406) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಉದ್ಯಮವನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಆ) ರಾಜ್ಯದಲ್ಲಿ ರೇಷ್ಮೆ ಬಟ್ಟೆ ತಯಾರು ಮಾಡುತ್ತಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು;

ಇ) ನೇಕಾರರು ಹಾಗೂ ರೈತರ ಸಂಬಂಧ ಸುಧಾರಣೆಗೊಳಿಸಲು ಸರ್ಕಾರ ಏನು ಕ್ರಮಕೈಗೊಂಡಿದೆ?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಹಿಂದಿನ ವರ್ಷಗಳಿಗೆ ಹೋಲಿಸಿದಾಗ 2002ರ ಡಿಸೆಂಬರ್ ಮಾಹೆಯಲ್ಲಿ ರೇಷ್ಮೆ ಗೂಡು/ಕಚ್ಚಾ ರೇಷ್ಮೆಯ ಧಾರಣೆಗಳು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾಗಿ ರಾಜ್ಯದ ರೇಷ್ಮೆ ಬೆಳೆಗಾರರು ಹಾಗೂ ರೇಷ್ಮೆ ನೂಲು ಬಿಚ್ಚುವವರು ಸಂಕಷ್ಟಕ್ಕೆ ಸಿಲುಕಿದ್ದರು. ಇದಕ್ಕೆ ಕಾರಣ ಚೀನಾ ದೇಶವು ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ರೇಷ್ಮೆಯನ್ನು ನಮ್ಮ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ನಮ್ಮ ದೇಶಕ್ಕೆ ಸುರಿಯುತ್ತಿರುವುದರಿಂದ ದೇಶಿಯವಾಗಿ ಉತ್ಪಾದಿಸಲಾದ ರೇಷ್ಮೆಗೆ ಬೇಡಿಕೆ ಕಡಿಮೆಯಾಗಿತ್ತು. ಈ ಹಿನ್ನೆಲೆಯಲ್ಲಿ ಚೀನಾ ದೇಶದ ಸುರಿ ನೀತಿಯ ವಿರುದ್ಧ ರಾಜ್ಯ ಸರ್ಕಾರ ಮತ್ತು ಕೇಂದ್ರ ರೇಷ್ಮೆ ಮಂಡಳಿಯವರು ಸಲ್ಲಿಸಿದ್ದ ಮನವಿಯು ಪುರಸ್ಕೃತವಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಾಲಯದ